ಮಾವು ಬರೀ ಹಣ್ಣಲ್ಲ. ಅದು ನಮ್ಮ ಸಂಸ್ಕೃತಿಯ ಭಾಗ. ಬಸವ ಜಯಂತಿಯಿಂದ ಮಾವಿನ ಹಣ್ಣು ಶೀಕರಣೆಯಾಗಿ ಊಟದ ತಟ್ಟೆಗೆ ಬಂದರೆ, ಆ ನಂತರ ತಿಂಡಿಗೂ, ಊಟಕ್ಕೂ, ರಾತ್ರಿಯ ಫಲಾಹಾರಕ್ಕೂ ಮಾವು ಕಾಣತೊಡಗುತ್ತದೆ. ಮಾವಿನ ಗಿಡ ಇದ್ದವರೆಲ್ಲ ಬಂಧುಬಳಗಕ್ಕೆ ಕಾಯಿ ಹಂಚುವ, ಅಡಿ ಹಾಕಿ ಹಣ್ಣು ಹಂಚುವ ಸಂಭ್ರಮದಲ್ಲಿರುತ್ತಾರೆ. ಈ ಮಾವಿನ ಸೀಸನ್ ಮುಗಿಯುವವರೆಗೂ ಮಾವಿನ ಬಣ್ಣ, ರುಚಿ ಮತ್ತು ಸ್ವಾದದೊಂದಿಗೆ ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ಸಂಭ್ರಮವೇ ಎದ್ದು ಕಾಣುತ್ತದೆ. ಹಣ್ಣುಗಳ ರಾಜ ಮಾವು, ನಾವು ಮತ್ತು ನೀವು ಎಂದು ಮಾತಾಡುತ್ತಲೇ ಸೌಹಾರ್ದವನ್ನೂ ಹಂಚುತ್ತದೆ. ಜೂನ್ 7ರ ನಂತರ ಭರಣಿಗಳಲ್ಲಿ ಉಪ್ಪಿನಕಾಯಿಯಾಗಿ ಭದ್ರವಾಗುವ ಮಾವು ಬದುಕಿನ ಹದವನ್ನೇ ಕೂಡಿಹಾಕಿದಂತಿರುತ್ತದೆ. ಕರ್ನಾಟಕದ ವಿಶೇಷ ತಳಿ ಮತ್ತು ರುಚಿಯ ಕುರಿತು 'ಆಮ್ ನಗರ' ಎನಿಸುವ ರಾಮನಗರದ ಮಂಡಿಯಿಂದ ಒದೇಶ ಸಕಲೇಶಪುರ ಸಮಗ್ರ ಮಾಹಿತಿಯನ್ನು ನೀಡಿದ್ದಾರೆ.

■ **ಒದೇಶ ಸಕಲೇಶಪುರ**




ಚಿತ್ರ: ಕಿಶೋರ್ ಕುಮಾರ್ ಬೋಳಾರ್